೧೨) ಬಿಜಾಪುರ ಜಿಲ್ಲೆಯ ೮ ಖಾಸಗಿ ಪದವೀ ಪೂರ್ವ ಕಾಲೇಜುಗಳ ಸಿಬ್ಬಂದಿಗೆ ವೇತನ ವನ್ನು ಬಿಡುಗಡೆ ಮಾಡದಿರುವುದು

ಶ್ರೀ ಬಾಬುರೆಡ್ಡಿ ವಿ ತುಂಗಳ್.— ಸನ್ಮಾನ್ಯ ಅಧ್ಯಕ್ಷರೇ, ಬೆಳಗಾವಿ ವಿಭಾಗದ ವಿಜಾಪುರ ಜಿಲ್ಲೆಯ ಯೋಜನೆಯಡಿಯಲ್ಲಿ ಬರುವ ೮ ಖಾಸಗೀ ಪದವೀಪೂರ್ವ ಕಾಲೇಜುಗಳ ಸಿಬ್ಬಂದಿಗೆ ೧೭ ತಿಂಗಳುಗಳ ಬಾಕೀ ವೇತನವನ್ನು ಬಿಡುಗಡೆ ಮಾಡಿಲ್ಲ. ೧೦-೮-೧೯೮೬ ರಿಂದ ೧-೧-೧೯೮೮ರ ವರೆಗಿನ ಬಾಕೀ ವೇತನ ಬಿಡುಗಡೆ ಯಾಗದೇ ಇರುವುದರಿಂದ, ಇಲ್ಲಿನ ಉಪನ್ಯಾಸಕರು ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದ್ದು, ಅವರು ಬೀದಿ ಪಾಲಾಗುವ ಸಂಭವವಿದೆ. ವಿಜಾಪುರ ಜಿಲ್ಲೆಯ ತೊದಲಬಾಗಿ, ತಿಕೋಟಾ, ಮುಂಜಗೊಳಿ, ದೇವರ ಹಿಪ್ಪರಗಿ, ಹಲಸಂಗಿ, ಹೊನವಾಡ ಮತ್ತು ಸಾವಳಗಿ ಪದವೀಪೂರ್ಣ ಕಾಲೇಜುಗಳ ಸಿಬ್ಬಂದಿ ಈ ತೊಂದರೆಯನ್ನು ಎದುರಿಸುತ್ತಿದ್ದಾರೆ.

ಈ ಕುರಿತು ಮಾನ್ಯ ಮುಖ್ಯ ಮಂತ್ರಿಗಳಿಗೆ ದಿನಾಂಕ ೧೨ ಹಾಗೂ ೨೪-೯-೧೯೮೮ ರಂದು ವಿಜಾಪುರಕ್ಕೆ ಆಗಮಿಸಿದಾಗ ಈ ಕಾಲೇಜು ನಿಯೋಗ ಬೇಗನೆ ಬಾಕೀ ವೇತನ ಬಿಡುಗಡೆಗೆ ಮತ್ತು ಪ್ರತಿ ತಿಂಗಳ ವೇತನ ''ಆದೇ ತಿಂಗಳಲ್ಲೆ ಸಂದಾಯವಾಗುವಂತೆ'' ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಮನವಿ ಪತ್ರ ಸಲ್ಲಿಸಿದ್ದಾರೆ. ಬೇರೆ ಜಿಲ್ಲೆಗಳ ಹಾಗೂ ಬೇರೆ ವಿಭಾಗಗಳ ಕೆಲವು ಪದವೀಪೂರ್ವ ಕಾಲೇಜುಗಳ ಸಿಬ್ಬಂದಿಯು ಬಾಕೀ ವೇತನ ಬಿಡುಗಡೆಯಾಗಿದ್ದು (ಉದಾ: ಮೂಡಲಗಿ, ಬೆಳಗಾವಿ ಜಿಲ್ಲೆ ಹಳಿಯಾಳ, ಧಾರವಾಡ ಜಿಲ್ಲೆ ಜೊತೆಗೂ ಹರಿಜನರ ಪದವೀ ಪೂರ್ವ ಕಾಲೇಜುಗಳಿಗೆ ವಿಜಾಪುರ ಜಿಲ್ಲೆಯ ಯಾವೊಂದೂ ಕಾಲೇಜುಗಳ ಸಿಬ್ಬಂದಿಯವರ ಬಾಕೀ ವೇತನ ಸಂಪೂರ್ಣವಾಗಿ ಬಿಡುಗಡೆಯಾಗಿಲ್ಲ.

ಕಾರಣ ಈ ಬೇಡಿಕೆಗಳ ಕುರಿತು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).— ಸನ್ಮಾನ್ಯ ಅಧ್ಯಕ್ಷರೇ, ಬೆಳಗಾವಿ ವಿಭಾಗದಲ್ಲಿ ಯೋಜನಾ ಅಡಿಯಲ್ಲಿ ೨೦ ಖಾಸಗೀ ಪದವಿಪೂರ್ವ ಕಾಲೇಜುಗಳು ಇದ್ದು (ವಿಜಾಪುರ ಜಿಲ್ಲೆಯು ಸೇರಿ) ಈ ವಿಭಾಗಕ್ಕೆ ೬೧ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಆದರೆ ಖಾಸಗೀ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯ ಮತ್ತು ಬಡ್ತಿ ಮುಖಾಂತರ ಕೊಟ್ಟ ಹೆಚ್ಚಿನ ವೇತನ ಹಣ, ಇವುಗಳನ್ನು ಕೊಟ್ಟಿದು ರಿಂದಲೂ ಮತ್ತು ರಾಜ್ಯ ಸರ್ಕಾರದ ಆರ್ಥಿಕ ಮಿತವ್ಯಯ ಇರುವುದರಿಂದ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುವುದರಲ್ಲಿ ವಿಳಂಬವಾಗಿದೆ ಹೆಚ್ಚಿನ ಅನುದಾನವನ್ನು ಖಾಸಗೀ ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಈ ತಿಂಗಳ ಅಂತ್ಯದೊಳಗಾಗಿ ಕ್ರಮ ತೆಗೆದುಕೊಳ್ಳಲಾಗುವುದು.

೧೩) ಕುಂದಾಪುರ ಭೂಸಂಧಾರಣೆ ಅಪೀಲು ಪ್ರಾಧಿಕಾರಕ್ಕೆ ಸದಸ್ಯರ ನೇಮಕ ಮತ್ತು ಅವರ ಕಾರ್ಯಾರಂಭ

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಕುಂದಾಪುರದಲ್ಲಿ ಭೂಸುಧಾರಣಾ ಅಪೀಲು ಪ್ರಾಧಿಕಾರ ವಂಜೂರಾಗಿ ವರ್ಷ ಎರಡಾಯಿತು. ಕಾನೂನು ಸದಸ್ಯರು ಬಂದರು ಕಂದಾಯ ಸದಸ್ಯರ ನೇಮಕ ಆಗಲಿಲ್ಲ. ಕಂದಾಯ ಸದಸ್ಯರ ನೇಮಕ ಆದಾಗ ಕಾನೂನು ಸದಸ್ಯರು ವಿಧಿವಶರಾಗಿದ್ದರು. ಕಟ್ಟಡ ನಿರ್ಮಾಣಕ್ಕೆ ಒಂದು ವರ್ಷವೇ ಬೇಕಾಯಿತು. ಕಳೆದ ಅಧಿವೇಶನದಲ್ಲಿ ಈ ವಿಚಾರ ಪ್ರಸ್ತಾಪಿಸಿದಾಗ, ಮಾಜಿ ಶಾಸಕಿ ಶ್ರೀಮತಿ ವಿನ್ಸಿಫ್ರೆಡ್ ಫೆರ್ನಾಂಡಿಸ್ ಅವರ ಕಟ್ಟಡ ನಿಗದಿ ಗೊಳಿಸಲಾಗಿದೆ ಎಂದು ಸರಕಾರದಿಂದ ಉತ್ತರ ಬಂದಿತ್ತು. ಇತ್ತೀಚೆಗೆ ಕಟ್ಟಡದ ಕರಿತು ಬೇರೆ ಪರಿಶೀಲನೆ ಆಗುತ್ತದೆ ಎಂದು ತಿಳಿದು ಬಂದಿದೆ. ಒಮ್ಮೆ ನಿರ್ಧಾರವಾದ ಜಾಗವನ್ನು ವಿಕಾಪಕ್ಕೆ ಬದಲಿಸುವ ಕುರಿತು ಸರಕಾರಕ್ಕೆ ಏನು ಕಾರಣ ಸಿಕ್ಕಿದೆ ? ಪ್ರಾಧಿಕಾರಕ್ಕೆ ಸದಸ್ಯರ ನೇಮಕ ಎಂದಾಗುವುದು ? ಯಾವಾಗ ಕಾರ್ಯಾರಂಭವಾಗುವುದು ? ಯಾವಾಗ ರೈತರ ಗೋಳು ತಪ್ಪುವುದು - ಎಂದು ಜನ ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ತುರ್ತು ಕ್ರಮಕ್ಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ.(ಮುಖ್ಯ ಮಂತ್ರಿಗಳ ಪರವಾಗಿ)(ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ ಕುಂದಾಪುರ ಅಧಿಕ ಭೂಸಂಧಾರಣೆ ಮೇಲ್ಮನವಿ ಪ್ರಾಧಿಕಾರಕ್ಕೆ ಈಗಾಗಲೇ ನ್ಯಾಯಾಂಗ ಹಿಗೂ ಕಂದಾಯ ಸದಸ್ಯರನ್ನು ನೇಮಿಸಲಾಗಿದೆ. ಮಾಜಿ ಸದಸ್ಯರಾದ ಶ್ರೀಮತಿ ವಿನ್ನಿಫ್ರೆಡ್ ಫರ್ನಾಂಡಿಸ್ ರವರ ಕಟ್ಟಡವನ್ನು ಈಗಾಗಲೇ ನಿಗಧಿಗೊಳಿಸಲಾಗಿದ್ದು ಸದರಿ ಕಟ್ಟಡದಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಡುವಂತೆ ಕೋರಲಾಗಿದ್ದು ಕಟ್ಟಡದ ಮಾಲೀಕರು ಈ ಮಾರ್ಪಾಡುಗಳನ್ನು ಇಲ್ಲಿಯವರೆವಿಗೆ ಮಾಡಿಕೊಟ್ಟಿರುವುದಿಲ್ಲ. ಆದಕಾರಣ ಕಾರ್ಯಾರಂಭದಲ್ಲಿ ವಿಳಂಬವಾಗುತ್ತದೆ. ಕಟ್ಟಡವನ್ನು ಮಾಲೀಕರಿಂದ ವಶಕ್ಕೆ ಪಡೆದು ಕಾರ್ಯಾರಂಭ ಮಾಡುವಂತೆ ಈಗಾಗಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಟ್ಟಡದ ಕುರಿತು ಇಲ್ಲಿಯವರೆಗೆ ಬೇರೆ ಪರಿಶೀಲನೆ ಸರ್ಕಾರದಲ್ಲಿ ನಡೆದಿರುವುದಿಲ್ಲ.

೧೪) ಜಿಲ್ಲಾ ಪರಿಷತ್ತುಗಳಿಗೆ, ಸಾರ್ವಜನಿಕ ಕಾಮಗಾರಿ ಇಲಾಖೆ ಪ್ರಾರಂಭಿಸಿದ ಕೆಲಸಗಳಿಗೆ ಸರ್ಕಾರ ಪ್ರತ್ಯೇಕವಾಗಿ ಹಣವನ್ನು ಬಿಡಂಗಡೆ ಮಾಡಲು ಒತ್ತಾಯ.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಾಗ ಸಾಲಮೂಲಗಳೊಡನೆ (ವಿತ್ ಆಸೆಟ್ಸ್ ಅಂಡ್ ಲಯಬಲೇಟೀಸ್) ಕೆಲವೊಂದು ಇಲಾಖೆಗಳ ಕಾಮಗಾರಿಗಳನ್ನು ವರ್ಗಾಯಿಸಲಾಗಿತ್ತು. ಆದರೆ ಕೆಲವು ಸಂದರ್ಭಗಳಲ್ಲಿ ಆಸೆಟ್ಸ್ ಇಲ್ಲದೆ ಬರೇ ಲಯಬಲೀಟೀಸ್ ಮಾತ್ರ ವರ್ಗಾವಣೆ ಆಗಿದೆ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬರುವ ಹೊದಲು ಸಾರ್ವಜನಿಕ ಕಾಮಗಾರಿ ಇಲಾಖೆ ಪ್ರಾರಂಭಿಸಿದ ರಸ್ತೆ ಮತ್ತು ಸೇತುವೆಗಳ ಅಪೂರ್ಣ ಕಾಮಗಾರಿಗಾಗಿ ಪೂರ್ತಿಗೊಳಿಸಲು ರೂ. ೬೨ ಲಕ್ಷ ಹಾಗೆಯೇ ಚಿಕ್ಕ ನೀರಾವರಿ ಕಾಮಗಾರಿ ಪೂರ್ತಿಗೊಳಿಸಲು ರೂ. ೬೨ ಲಕ್ಷ ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ಇವು ಜಿಲ್ಲಾ ಪರಿಷತ್ತು ಪ್ರಾರಂಭಿಸಿದ ಕಾಮಗಾರಿಗಳಲ್ಲ. ಅಪೂರ್ಣವಾದ ಅರ್ಧ ಸೇತುವೆ ಕಾಲು ಸೇತುವೆಗಳು ಅಸೆಟ್ಸ್ ಸಹಾ ಅಲ್ಲ. ಅನೇಕ ಕಾಮಗಾರಿಗಳು ಮುಂಡಲ ವರ್ಗ ಎರಡರನ್ವಯ ಪೂರ್ತಿಗೊಳಿಸಲ್ಪಡಬೇಕಾದ ಪ್ರಯುಕ್ತ ಈಗಿನ ನಿಯೋಚಿತ ಅನುದಾದಂತೆ ಕೆಲವು ಕಾಮಗಾರಿಗಳನ್ನು ಪೂರ್ತಿಗೊಳಿಸಲು ಹತ್ತಿಪ್ಪತ್ತು ವರ್ಷಗಳೇ ಬೇಕಾಗಬಹುದು. ಸಾರ್ವಜನಿಕ ಕಾಮಗಾರಿ ಇಲಾಖೆ ಪ್ರಾರಂಭಿಸಿದ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಬೇಕಾದ ಹಣ ಒದಗಿಸುವುದು ಸರ್ಕಾರದ ಕರ್ತವ್ಯ ವಾಗಿದೆ. ಆದ್ದರಿಂದ ಈ ಸಲುವಾಗಿ ಪ್ರತ್ಯೇಕ ಹಣವನ್ನು ಜಿಲ್ಲಾ ಪರಿಷತ್ತಿಗೆ ಬಿಡುಗಡೆ ಮಾಡಲು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ.— ಇದಕ್ಕೆ ಉತ್ತರ ತರಿಸಿಕೊಡುತ್ತೇನೆ.

೧೫) ಗುಳೇದಗುಡ್ಡದ ಪುರಸಭೆಯಲ್ಲಿ ಭ್ರಷ್ಟಾಚಾರಕ್ಕೆ ಒಳಗಾದವರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಎಸ್. ಜಿ. ನಂಜಯ್ಯನವಮಠ.— ಬಿಜಾಪುರ ಜಿಲ್ಲೆಯ ಗುಳೇದಗುಡ್ಡದ ಪುರಸಭೆಯಲ್ಲಿ ಒಹುದಿನಗಳಿಂದ ನಡೆಯುತ್ತಿರುವ ಭ್ರಷ್ಟಾಚಾರದ ತನಿಖೆಗಾಗಿ ಸಾರ್ವಜನಿಕರು ಸುಮಾರು ಹತ್ತು ದಿನಕ್ಕಿಂತ ಹೆಚ್ಚು ಸತ್ಯಾಗ್ರಹವನ್ನು ಹೊಡಿದ್ದರು. ಈ ವಿಷಯವಾಗಿ ನಿರ್ದೇಶಕರು ಪುರಸಭೆ ಇಲಾಖೆಯಿಂದ ವಿಚಾರಣೆಗೆ ಆಗಮಿಸಿದ್ದರು. ಅವರು ವಿಚಾರಣೆ ಮಾಡಿಕೊಂಡು ಹೋಗಿರುವರು ಆಪಾದನೆಗಳು ಸಿದ್ಧಪಟ್ಟಿರುವವೆ ? ತಪ್ಪಿತಸ್ಥರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ? ಸಮಿತಿಯ ಸದಸ್ಯರು. ಅಧ್ಯಕ್ಷರು ಇವರ ಮೇಲೆ ಕ್ರಮ ಕೈಗೊಳ್ಳುವಂತಹ ಪ್ರಕರಣಗಳು ಇವೆಯೇ ? ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಸಿದ್ದರಾಮಯ್ಯ.— ಈಗಾಗಲೇ ನಾವು ಒಬ್ಬ ಹಿರಿಯ ಅಧಿಕಾರಿಗಳನ್ನು ಆಲ್ಲಿಗೆ ಕಳುಹಿಸಿ ವರದಿ ತರಿಸಿದ್ದೇವೆ. ನಂತರ ಈಗಿನ ಮತ್ತು ಹಿಂದಿನ ಚೀಫ್ ಆಫೀಸರ್‌ಗಳನ್ನು ಸಸ್ಪೆಂಡ್‌ನಲ್ಲಿಟ್ಟಿದ್ದೇವೆ ಅವರು ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯುನಲ್‌ಗೆ ಹೋಗಿ ಸ್ಟೇ ತಂದಿದ್ದಾರೆ. ನಗರ ಸಭಾಧ್ಯಕ್ಷರು ಮತ್ತು ಸದಸ್ಯರ ತಪ್ಪಿದ್ದರೆ ಕ್ರಮ ಕೈಗೊಳ್ಳುವುದಕ್ಕೆ ಹಿಂದು ಮುಂದು ನೋಡುವುದಿಲ್ಲ. ಈಗಾಗಲೇ ವರದಿ ಕೂಡ ಬಂದಿದೆ. ಸರ್ಕಾರ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತದೆ.